ಪ-330 - (98)

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ. ಎಂ. ಫಾರೂಖ್ ಇವರು ನಿಯಮ 330 ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:98 ಕ್ಕೆ ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ:

ವಿಷಯ: ಇತ್ತೀಚೀಗೆ ನಡೆದ COP-26 ಶೃಂಗ ಸಭೆಯಲ್ಲಿ 2021 ರಿಂದ 2030ರ ವರೆಗೆ ಭಾರತವು 4.5 ಲಕ್ಷ ಮೆಗಾವ್ಯಾಟ್ ವಿದ್ಯುತ್ ಅನ್ನು ನವೀಕರಿಸಬಹುದಾದ ಇಂಧನ ಮೂಲಕ ಉತ್ಪಾದಿಸಬೇಕೆಂದು ತೀರ್ಮಾನಿಸಲಾಗಿರುತ್ತದೆ. ಅದರಂತೆ, ನವೀಕರಿಸಬಹುದಾದ ಇಂಧನದಿಂದ ಉತ್ಪಾದಿಸುವ ಸದರಿ 4.5 ಲಕ್ಷ ಮೆಗಾವ್ಯಾಟ್ ವಿದ್ಯುತ್‌ನಲ್ಲಿ ಕರ್ನಾಟಕದ ಪಾಲು ಎಷ್ಟು ಇರುತ್ತದೆ ಹಾಗೂ ಈ ಸಂಬಂಧ ಕರ್ನಾಟಕವು ಕೈಗೊಂಡ ಕ್ರಮಗಳ ಹಾಗೂ ರಚಿಸಲಾದ ನೀತಿ (policy) ಗಳ ಕುರಿತು.

*****

ಕೇಂದ್ರ ಸರ್ಕಾರವು ವರ್ಷ 2030 ರೊಳಗೆ ಇಂಗಾಲದ ಹೊರಸೂಸುವಿಕೆಯನ್ನು ತಗ್ಗಿಸುವ ನಿಟ್ಟಿನಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ 500 GW ನಷ್ಟು ಸಾಮರ್ಥ್ಯದ ಯೋಜನೆಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿದೆ. ಇದರಲ್ಲಿ ರಾಜ್ಯಕ್ಕೆ **15,091** ಮೆ.ವ್ಯಾ ನಷ್ಟು ಸಾಮರ್ಥ್ಯದ ಸೌರ ಘಟಕಗಳನ್ನು ಮತ್ತು **7,545** ಮೆ.ವ್ಯಾನಷ್ಟು ಸಾಮರ್ಥ್ಯದ ಪವನ ವಿದ್ಯುತ್ ಘಟಕಗಳನ್ನು ಅನುಷ್ಠಾನಗೊಳಿಸಲು ಗುರಿ ನಿಗದಿಪಡಿಸಿದೆ.

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಪ್ರೋತ್ಸಾಹ ನೀಡಲು ಹಾಗೂ ಕೇಂದ್ರ ಸರ್ಕಾರ ನಿಗದಿಪಡಿಸಿದ ಸೌರೇತರ ಮತ್ತು ಸೌರ ನವೀಕರಿಸಬಹುದಾದ ಖರೀದಿ ಭಾಧ್ಯತೆಯನ್ನು (ಆರ್.ಪಿ.ಓ) ತಲುಪುವ ನಿಟ್ಟಿನಲ್ಲಿ, ನವೀಕರಿಸಬಹುದಾದ ಇಂಧನ ನೀತಿ 2009-2014 ಅನ್ನು ಮತ್ತು ಸೌರನೀತಿ 2014-2021 ಅನ್ನು ಜಾರಿಗೆ ತಂದಿರುತ್ತದೆ.

ಸದರಿ ನೀತಿಗಳಲ್ಲಿ ಅವಕಾಶ ಕಲ್ಪಿಸಿದಂತೆ, ನವೆಂಬರ್-2021 ರ ಅಂತ್ಯಕ್ಕೆ 36,916.85 ಮೆ.ವ್ಯಾ ನವೀಕರಿಸಬಹುದಾದ ಇಂಧನ ಮೂಲಗಳ ಯೋಜನೆಗಳನ್ನು ಸ್ವಯಂ ಬಳಕೆ, ಸಮೂಹ ಸ್ವಯಂ ಬಳಕೆ, ಮೂರನೇ ವ್ಯಕ್ತಿ ಮಾರಾಟ, ಮತ್ತು ಆರ್.ಪಿ.ಓ ವರ್ಗಗಳಡಿ ಹಂಚಿಕೆ ಮಾಡಲಾಗಿದ್ದು, ಇದರಲ್ಲಿ 10850.52 ಮೆ.ವ್ಯಾ. ಸಾಮರ್ಥ್ಯದಷ್ಟು ಯೋಜನೆಗಳು ರದ್ದುಗೊಂಡಿದ್ದು, 15374.55 ಮೆ.ವ್ಯಾ ಸಾಮರ್ಥ್ಯದ ಯೋಜನೆಗಳು ಅನುಷ್ಠಾನಗೊಂಡಿವೆ. ವಿವರಗಳು ಈ ಕೆಳಗಿನಂತಿದೆ:

| ಕ್ರಮ ಸಂಖ್ಯೆ | ಮೂಲ | ಹಂಚಿಕೆ ಮಾಡಿದ ಸಾಮರ್ಥ್ಯ ಮೆ.ವ್ಯಾ. ನಲ್ಲಿ | ಅನುಷ್ಠಾನಗೊಂಡ ಸಾಮರ್ಥ್ಯ ಮೆ.ವ್ಯಾ ನಲ್ಲಿ | ರದ್ದುಗೊಂಡಿರುವ ಸಾಮರ್ಥ್ಯ ಮೆ.ವ್ಯಾ. ನಲ್ಲಿ | ಅನುಷ್ಠಾನಗೊಳ್ಳಬೇಕಾಗಿರುವ ಸಾಮರ್ಥ್ಯ ಮೆ.ವ್ಯಾ. ನಲ್ಲಿ |
|---|---|---|---|---|---|
| 1 | ಪವನ | 21088.11 | 5095.44 | 9322.01 | 6670.66 |
| 2 | ಸೌರ | 10159.96 | 7505.46 | 713.00 | 1941.51 |
| 3 | ಕಿರು ಜಲ | 3010.00 | 903.46 | 815.51 | 1291.03 |
| 4 | ಸಹ ವಿದ್ಯುತ್ | 2212.65 | 1731.16 | 0 | 481.49 |
| 5 | ಜೈವಿಕ | 395.13 | 139.03 | 0 | 256.10 |
| 6 | ಘನ ತ್ಯಾಜ್ಯ | 51 | 0 | 0 | 51.00 |
| | ಒಟ್ಟು | **36916.85** | **15374.55** | **10850.52** | **10691.79** |

ಕರ್ನಾಟಕ ರಾಜ್ಯಕ್ಕೆ 2030 ಕ್ಕೆ ನಿಗದಿಪಡಿಸಿದ ಸೌರ ಮತ್ತು ಪವನ ಗುರಿಗಳನ್ನು ಸಾಧಿಸಲು **7586** ಮೆ.ವ್ಯಾನಷ್ಟು ಸಾಮರ್ಥ್ಯದ ಸೌರ ಯೋಜನೆಗಳು ಮತ್ತು **2450** ಮೆ.ವ್ಯಾ ನಷ್ಟು ಸಾಮರ್ಥ್ಯದ ಪವನ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಿರುತ್ತದೆ.

ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ಕೇಂದ್ರ ಇಂಧನ ಮಂತ್ರಾಲಯದಿಂದ ರಾಜ್ಯಕ್ಕೆ ವರ್ಷ 2019-20 ಮತ್ತು ವರ್ಷ 2020-21 ಕ್ಕೆ ನಿಗದಿಪಡಿಸಿದ ಸೌರ ಮತ್ತು ಸೌರೇತರ ನವೀಕರಿಸಬಹುದಾದ ಇಂಧನ ಖರೀದಿ ಭಾದ್ಯತೆ ಗುರಿಯನ್ನು ಮೀರಿ ಪ್ರಗತಿ ಸಾಧಿಸಿವೆ. ವಿವರಗಳು ಈ ಕೆಳಗಿನಂತಿದೆ:

| ವರ್ಷ | ಸೌರ ಆರ್.ಪಿ.ಓ | | ಸೌರೇತರ ಆರ್.ಪಿ.ಓ | |
|---|---|---|---|---|
| | ಕೇಂದ್ರ ಇಂಧನ ಮಂತ್ರಾಲಯದಿಂದ ನಿಗದಿಪಡಿಸಿದ ಗುರಿ % ನಲ್ಲಿ | ಸಾಧನೆ % ನಲ್ಲಿ | ಕೇಂದ್ರ ಇಂಧನ ಮಂತ್ರಾಲಯದಿಂದ ನಿಗದಿಪಡಿಸಿದ ಗುರಿ % ನಲ್ಲಿ | ಸಾಧನೆ % ನಲ್ಲಿ |
| **2019-20** | 7.25 | 17.47 | 10.25 | 19.65 |
| **2020-21** | 8.75 | 19.61 | 10.25 | 19.84 |

ಅಲ್ಲದೇ, ಕೆ.ಇ.ಆರ್.ಸಿ ಯಿಂದ 2021-22 ಸಾಲಿಗೆ ನಿಗದಿಪಡಿಸಿದ ಸೌರ ಮತ್ತು ಸೌರೇತರ ನವೀಕರಿಸಬಹುದಾದ ಇಂಧನ ಖರೀದಿ ಭಾದ್ಯತೆ ಗುರಿ ಮತ್ತು ವಿ.ಸ.ಕಂ. ಗಳು ಮೊದಲನೇ ತ್ರೈ-ಮಾಸಿಕದ ಅವಧಿಯಲ್ಲಿ ಸಾಧಿಸಿದ ಆರ್.ಪಿ.ಓ ವಿವರ ಈ ಕೆಳಗಿನಂತಿದೆ:

| ಕ್ರಮ ಸಂಖ್ಯೆ | ಎಸ್ಕಾಂಗಳು | ಕೆ.ಇ.ಆರ್.ಸಿಯಿಂದ 2021-22ಕ್ಕೆ ನಿಗದಿಪಡಿಸದ ಆರ್.ಪಿ.ಓ ಗುರಿ % | ಎಸ್ಕಾಂಗಳಿಂದ ತಲುಪಿದ ಗುರಿ % (ಏಪ್ರಿಲ್ 2021 - ಜೂನ್ 2021ರ ಅಂತ್ಯಕ್ಕೆ) | ಕೆ.ಇ.ಆರ್.ಸಿಯಿಂದ 2021-22 ಕ್ಕೆ ನಿಗದಿ ಪಡಿಸಿದ ಆರ್.ಪಿ.ಓ ಗುರಿ % | ಎಸ್ಕಾಂಗಳಿಂದ ತಲುಪಿದ ಗುರಿ % (ಏಪ್ರಿಲ್ 2021 - ಜೂನ್ 2021ರ ಅಂತ್ಯಕ್ಕೆ) |
|---|---|---|---|---|---|
| | | ಸೌರೇತರ | | ಸೌರ | |
| 1 | ಬೆಸ್ಕಾಂ | 12 | 10.78 | 10.5 | 18.278 |
| 2 | ಜೆಸ್ಕಾಂ | 8 | 24.05 | 10.5 | 18.684 |
| 3 | ಹೆಸ್ಕಾಂ | 11 | 16.17 | 10.5 | 13.026 |
| 4 | ಮೆಸ್ಕಾಂ | 13 | 12.67 | 10.5 | 21.266 |
| 5 | ಸೆಸ್ಕ್ | 12 | 5.23 | 10.5 | 19.951 |

ಪ್ರಸ್ತುತ, ವಿದ್ಯುತ್ ಸರಬರಾಜು ಕಂಪನಿಗಳು ಕೆ.ಇ.ಆರ್.ಸಿ ರವರು 2022 ನೇ ಸಾಲಿಗೆ ನಿಗದಿಪಡಿಸಿದ ಸೌರ ಮತ್ತು ಸೌರೇತರ ಆರ್.ಪಿ.ಓ ಗುರಿಯನ್ನು ಈಗಾಗಲೇ ತಲುಪಿರುವುದರಿಂದ ಮುಂದಿನ ಆದೇಶದವರೆಗೂ ಟೆಂಡರ್‌ಗಳನ್ನು ಕರೆಯದಂತೆ ಕ್ರೆಡಲ್ ಸಂಸ್ಥೆಗೆ ಸೂಚಿಸಿರುತ್ತಾರೆ.

PCKL ನವರು 2030 ಕ್ಕೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬೇಕಾಗುವ ಸೌರ ಮತ್ತು ಪವನ ವಿದ್ಯುತ್ ಉತ್ಪಾದನ ಬೇಡಿಕೆಗಳನ್ನು ಅಧ್ಯಯನ ಮಾಡುತ್ತಿದ್ದು, ಅಧ್ಯಯನದ ವರದಿಯನ್ವಯ ಬೇಡಿಕೆ ಆಧರಿಸಿ ಆರ್.ಪಿ.ಓ ವರ್ಗದಡಿ ಟೆಂಡರ್ ಕರೆಯಲು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಮುಂದುವರೆದು, ರಾಜ್ಯದಲ್ಲಿ ಹೊಸದಾಗಿ ಈ ಕೆಳಗಿನ ಸೌರ ಮತ್ತು ಸೌರೇತರ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

1. **KUSUM C (Solarisation of Agriculture Feeders)**: MNRE ರವರು ರಾಜ್ಯಕ್ಕೆ 2020–21 ನೇ ಸಾಲಿನಲ್ಲಿ 2,50,000 ಪಂಪ್ ಸೆಟ್ ಗಳನ್ನು ಸೌರೀಕರಣಗೊಳಿಸಲು ಅನುಮೋದನೆಯನ್ನು ನೀಡಿರುತ್ತಾರೆ. ಇದರ ಅಂದಾಜು ಸೌರ ಶಕ್ತಿ ಸಾಮರ್ಥ್ಯವು 1200 ಮೆ.ವ್ಯಾ ಆಗುತ್ತದೆ ಮತ್ತು ಮುಂದಿನ ವರ್ಷಗಳಿಗೂ ಸಹ ಸದರಿ ಯೋಜನೆಯಲ್ಲಿ ಪಂಪ್ ಸೆಟ್ ಗಳನ್ನು ಸೌರೀಕರಣಗೊಳಿಸಲು ಗುರಿ ನೀಡುವ ನಿರೀಕ್ಷೆ ಇದ್ದು, ಈ ಸೌರ ಸಾಮರ್ಥ್ಯವು ಮುಂದಿನ ಪ್ರತಿ ವರ್ಷಗಳಲ್ಲಿ ಸಹ ಅನುಷ್ಠಾನಗೊಳಿಸುವ ನಿರೀಕ್ಷೆ ಇದೆ.

2. **500ಮೆ.ವ್ಯಾ ಸಾಮರ್ಥ್ಯದ ಕಲಬುರ್ಗಿ ಸೋಲಾರ್ ಪಾರ್ಕ್**: ರಾಜ್ಯದಲ್ಲಿ ಕ್ರೆಡಲ್ ನಿಂದ 500 ಮೆ.ವ್ಯಾ ಸೌರ ಪಾರ್ಕ್ ಅನ್ನು ಕಲಬುರ್ಗಿ ತಾಲ್ಲೂಕಿನಲ್ಲಿ UMREPP ಯೋಜನೆಯಡಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಯೋಜನೆಯು 2024 ರೊಳಗೆ ಅನುಷ್ಠಾನಗೊಳ್ಳುವ ಗುರಿ ಹೊಂದಿದೆ.

3. **ಸ್ವಯಂ ಬಳಕೆ, ಸಮೂಹ ಬಳಕೆ, ಮೂರನೇ ವ್ಯಕ್ತಿ ಮಾರಾಟ ಮತ್ತು ISTS ವರ್ಗಗಳಡಿ** 6670 ಮೆ.ವ್ಯಾ ನಷ್ಟು ಸಾಮರ್ಥ್ಯದ ಪವನ ಮತ್ತು 3646 ಮೆ.ವ್ಯಾ ನಷ್ಟು ಸಾಮರ್ಥ್ಯದ ಸೌರ ಘಟಕಗಳು ಹಂಚಿಕೆಯಾಗಿದ್ದು ಒಟ್ಟು 10,316 ಮೆ.ವ್ಯಾಗಳಷ್ಟು ಸಾಮರ್ಥ್ಯದ ಘಟಕಗಳು ಅನುಷ್ಠಾನಗೊಳ್ಳುವ ನಿರೀಕ್ಷೆ ಇದೆ.

**ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2021–26**

ಕೇಂದ್ರ ಸರ್ಕಾರವು ನಿಗದಿಪಡಿಸಿರುವ 500 GW ಸಾಮರ್ಥ್ಯದ ಗುರಿಯನ್ನು ತಲುಪುವ ನಿಟ್ಟಿನಲ್ಲಿ ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಒತ್ತು ನೀಡಲು ಮತ್ತು ಬಂಡವಾಳ ಹೂಡಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ "ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2021–2026" ಜಾರಿಗೆ ತರಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಎನರ್ಜಿ 290 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು